ತೆಗೆದುಕೊಳ್ಳುತ್ತದೆ. ಅದೇ ರೀತಿ ಮುಂದೆ ಎರಡು ಡಿವಿಜನ್‌ಗಳಲ್ಲೂ ಕೂಡ ಯಾವುದೇ ರೀತಿಯ ಗೊಂದಲಕ್ಕೆ ಅವಕಾಶ ಕೊಡದ ಹಾಗೆ ಸರ್ಕಾರ ಎಚ್ಚರಿಕೆಯನ್ನು ವಹಿಸುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಇವತ್ತು ಇರುವಂತಹ ತೊಂದರೆ ಏನೆಂದರೆ ಈಗಾಗಲೆ ಬೇರೆ ಇಲಾಖೆಗಳಲ್ಲಿ ರೋಸ್ಟರ್ ಕಂ ಮೆರಿಟ್ ಎಂದು ಮಾಡಿರುವುದರಿಂದ ಏನು ಲೋಪದೋಷಗಳು ಆಗುತ್ತವೆ ಅದೆನ್ನು ನಿವಾರಣೆ ಮಾಡಿಕೊಳ್ಳಬಹುದು. ಅದಕ್ಕೆ ಸರ್ಕಾರ ಏಕೆ ಬದ್ಧವಾಗಿಲ್ಲ?

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮೆರಿಟ್ ವಿಚಾರ ಬಂದಾಗ ರೂಲ್ ಕೂಡ ರೋಸ್ಟರ ಪ್ರಕಾರ ಬರಬೇಕೆಂಬುದು ತಮಗೂ ಗೊತ್ತಿದೆ. ಶೇ. 50ರಷ್ಟು ರಿಸರ್ವೇಷನ್ ಏನು ಇದೆ, ಅದನ್ನು ಕೊಡುವಂತಹ ಸಂದರ್ಭದಲ್ಲಿ ನಾವು ಕಡ್ಡಾಯವಾಗಿ ಅದನ್ನು ಪಾಲನೆ ಮಾಡುವಂಥಾದ್ದು ನಮ್ಮ ಕರ್ತವ್ಯ ಹಾಗು ಅದು ಸರ್ಕಾರದ ಸೂಚನೆಯಾಗಿದೆ. ಇಲ್ಲಿ ಪ್ಯೂರಲಿ ಮೆರಿಟ ಏನ್ನುವಂತಹ ವಿಚಾರ ಬಂದಾಗ ಅಲ್ಲಿಯೂ ಕೂಡ ರೊಸ್ಟರ್ ಎನ್ನುವಂಥಾದ್ದನ್ನು ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೆ, ಅದನ್ನು ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯ ವಿದ್ಯುತ್ ಬರದಿಂದ ನಲುಗುತ್ತಿರುವಂತಹ ಸಂದರ್ಭದಲ್ಲಿ ಇವತ್ತಿನ ವೃತ್ತಪತ್ರಿಕೆಗಳಲ್ಲಿ...

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತ ಮಂತ್ರಿಗಳು ಇದ್ದಾರೆಯೆ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ, ಆದರೆ ಆ ಖಾತೆ ಮಾನ್ಯ ಮುಖ್ಯಮಂತ್ರಿಯವರ ಅಧೀನದಲ್ಲಿದೆ.

ಅಧ್ಯಕ್ಷರು : ಮುಖ್ಯಮಂತ್ರಿಯವರ ಅಧೀನದಲ್ಲಿದ್ದರೆ, ಅವರು ಬೇರೆಯವರ ಅಧೀನದಲ್ಲಿದ್ದಾರೆ. ಈಗ ನಾನು ಏನು ಮಾಡಲಿ, ಮೊದಲನೆಯ ದಿವಸವೇ ಅಧಿಕಾರ ಸ್ವೀಕಾರ ಮಾಡುವಂತಹ ಸಂದರ್ಭದಲ್ಲಿ ಆ ಕೆಲಸ ಸದನದಲ್ಲಿ ನಡೆಯಬಾರದೆಂದು ಹೇಳಿದ್ದೆ.

(ಖೂ) ಕರ್ನಾಟಕ ರಾಜ್ಯ ವಿದ್ಯುತ್ ನಿಗಮದ ಎರಡು ಸಾವಿರ ಜನ ಪದವೀಧರ ಇಂಜಿನಿಯರುಗಳಿಂದ ಮುಷ್ಕರ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಇಡೀ ರಾಜ್ಯ ವಿದ್ಯುತ್ ಬರದಿಂದ ನಲುಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದ ವೃತ್ತಪತ್ರಿಕೆಗಳಲ್ಲಿ ಒಂದು ದೊಡ್ಡ ಕರಾಳ ಸುದ್ದಿ ಇಡೀ ರಾಜ್ಯದ ಜನರಿಗೆ ಬಂದಿದೆ. ಇದು ಏನೆಂದರೆ ಕರ್ನಾಟಕ ರಾಜ್ಯ ವಿದ್ಯುತ್ ನಿಗಮದ ಸುಮಾರು 8 ಘಟಕಗಳು, 3,200 ಮೆ.ವ್ಯಾ ವಿದ್ಯುತ್ ಉತ್ಪಾದನೆ ಮಾಡುವಂತಹ ಘಟಕಗಳು ಎರಡು ಸಾವಿರ ಜನ ಪದವೀಧರ ಇಂಜಿನೀಯರ್‌ಗಳು ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. ಇನ್ನು ಕೇವಲ 72 ಗಂಟೆಗಳ ಕಾಲ

ಮಾತ್ರ ಇದೆ. ಅವರು 45 ದಿವಸಗಳ ಹಿಂದೆ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದರು. ಅವರು ಮುಷ್ಕರ ನೋಟೀಸ್ ಅನ್ನು ಕೊಟ್ಟಿದ್ದಾರೆ. 72 ಗಂಟೆಗಳಲ್ಲಿ ಮುಂದುವರೆಯುವಂತಹ ಅವರ ಮುಷ್ಕರದಿಂದ ರಾಜ್ಯ ಕತ್ತಲಾಗುತ್ತದೆ, ಮತ್ತು ಉತ್ಪಾದನೆಯ ಮೇಲೆ ನೇರ ಪರಿಣಾಮವಾಗುತ್ತದೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ತಾವು ಅವರನ್ನು ಕರೆಯಿಸಿ ಮಾತನಾಡುವಂತಹ ಏನಾದರೂ ಯೋಜನೆ ಮಾಡಿದ್ದಿರಾ? ಅವರ ಬೇಡಿಕೆಗಳನ್ನು ತಾವು ಬೆಂಬಲಿಸುತ್ತಿರೋ ಇದಕ್ಕೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡಿದ್ದೀರೋ? ಅವರು ಮುಷ್ಕರ ಮಾಡುವುದು ಉಚಿತವಾದರೆ, ವಿದ್ಯುತ್ ಉತ್ಪಾದನೆಗೆ ಧಕ್ಕೆಯಾಗಬಾರದು, ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಉತ್ಪಾದನಾ ಕಾರ್ಯವನ್ನು ನೋಡಿಕೊಳ್ಳುವುದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಿ ಎಂದು ಆಡಳಿತ ವರ್ಗದವರಿಗೆ ತಿಳಿಸುತ್ತಾ ವಿದ್ಯುತ್ ಉತ್ಪಾದನೆಯ ಎಲ್ಲಾ ಯಂತ್ರಗಳನ್ನು ಸುಸ್ಥಿತಿಯಲ್ಲಿ ಇಟ್ಟು ಅವರು ಮುಷ್ಕರವನ್ನು ಆರಂಭಿಸಿದ್ದಾರೆ. ಅವರು ಮುಷ್ಕರದಲ್ಲೂ ಒಂದು ನಿಯತ್ತನ್ನು ಅನುಸರಿಸುತ್ತಿದ್ದಾರೆ. ದಯಮಾಡಿ ಈ ರಾಜ್ಯದ ಹಿತದೃಷ್ಟಿಯಿಂದ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಈ ರೀತಿ ವಿದ್ಯುತ್ ಅಪಾಯದಲ್ಲಿರುವಂತಹ ಸಂದರ್ಭದಲ್ಲಿ ಮತ್ತೊಮ್ಮೆ ಉತ್ಪಾದನೆಯ ಮೇಲೆ ಹೊಡೆತ ಬೀಳಬಾರದೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತಾ ಅವರನ್ನು ತಕ್ಷಣ ಮಾತುಕತೆಗೆ ಕರೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪವರ್ ಕಾರ್ಪೊರೇಷನ್ ಇಂಜಿನೀಯರ್ ಅಸೋಸಿಯೇಷನ್, ಟ್ರೇಡ್ ಯೂನಿಯನ್ ಅಲ್ಲ. ಅವರು ಬಹಳ ಜವಾಬ್ದಾರಿಯುತವಾದಂತಹ ಅಧಿಕಾರಿಗಳು, ಇಲ್ಲಿಯವರೆಗೆ ಯಾವುದೇ ಸಂದರ್ಭದಲ್ಲೂ ಕಾರ್ಪೊರೇಷನಗೆ ಅಡ್ಡಿಯಾಗುವಂತಹ ಧಕ್ಕೆಯಾಗುವಂತಹ ಕೆಲಸವನ್ನು ಮಾಡಿಲ್ಲ. ಈಗ ಅವರ ಬೇಡಿಕೆಗಳು ಏನು ಎಂಬುದು ನನಗೆ ಸಂಪೂರ್ಣವಾಗಿ ಗೊತ್ತಿಲ್ಲ. ಆದರೆ ನಾನು ಎಂ.ಡಿ. ಯವರಿಗೆ ಹೇಳಿದ್ದೇನೆ. ಅವರನ್ನು ಕರೆಯಿಸಿ ಮಾತನಾಡಿ, ಅವಶ್ಯಕತೆ ಏನಾದರೂ ಇದ್ದರೆ ನಾನು ಮಧ್ಯೆ ಪ್ರವೇಶ ಮಾಡಬೇಕಾದಲ್ಲಿ ಬರುತ್ತೇನೆಂದು ಹೇಳಿದ್ದೇನೆ. ಅವರು ಇದಕ್ಕೆ ಒಪ್ಪಿಕೊಂಡು ಹೋಗಿದ್ದಾರೆ.

(ಎ) ನ್ಯಾಷನಲ್ ಹೈವೆ ನಂ.17ರಲ್ಲಿ ಬರುವ ಶರಾವತಿ ಸೇತುವೆ ಮೇಲೆ 10 ಟನ್ ಭಾರದ ವಾಹನಗಳ ಓಡಾಟಕ್ಕೆ ಅನುವು ಮಾಡುವ ಕುರಿತು.

ಡಾ: ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೆ, ಶರಾವತಿ ಸೇತುವೆ ನ್ಯಾಷನಲ್ ಹೈವೇ ನಂ.17 ಇದು ಕೇರಳ, ಮುಂಬೈ, ಮಹಾರಾಷ್ಟ್ರ ಮತ್ತು ಸೂರತ್‌ವರೆಗೆ ಹೊಂದಿರುವಂತಹ ಸೇತುವೆಯಾಗಿದೆ. ಆರು ವರ್ಷಗಳ ಹಿಂದೆ ಈ ಸೇತುವೆ ವಾಹನಗಳ ಸಂಚಾರಕ್ಕೆ ಅಪಾಯಕಾರಿಯಾಗದೆ ಎಂದು ಸರ್ಕಾರ ಘೋಷಣೆ ಮಾಡಿತ್ತು. ಆದಾದನಂತರ ಸರ್ಕಾರ ಸಾರ್ವಜನಿಕರಿಗೆ ತೊಂದರೆಯಾಗುವಂತೆ ಕೆಲಸ ಮಾಡಿಕೊಂಡು ಬಂದಿದೆ. ಈ ಸೇತುವೆ ಮೇಲೆ ಪ್ರಾರಂಭದಲ್ಲಿ ಯಾವುದೇ ವಾಹನಗಳ ಸಂಚಾರವನ್ನು ನಿಷೇದಿಸಿತ್ತು. ನಂತರ ಲಘು ವಾಹನಗಳನ್ನು ಅದರ ಮೇಲೆ ಹೋಗುವುದಕ್ಕೆ